ಅಡಿಯಲ್ಲಿ ನಿಗದಿಪಡಿಸಲಾಗಿದೆ. 20.05 ಕೋಟಿ ಬಿಡುಗಡೆ ಮಾಡಲಾಗಿದೆ.

ಆ) ಇದೆ. ಸರ್ಕಾರದ ಔಷಧ ನಿಯಂತ್ರಣ ಇಲಾಖೆಯಲ್ಲಿ 1940ರ ಔಷಧಗಳ ಮತ್ತು ಪ್ರಸಾಧನ ಸಾಮಗ್ರಿಗಳ ಅಧಿನಿಯಮದ ಮೇರೆಗೆ, ಔಷಧಿಗಳ ಗುಣಮಟ್ಟ ಪರೀಕ್ಷಿಸಲು ಪ್ರಯೋಗಾಲಯದಲ್ಲಿ ವ್ಯವಸ್ಥೆ ಇದೆ.

ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ನೇಮಕಾತಿ.

363 - ಡಾ. ಯು. ಚಿತ್ತರಂಜನ್ (ಭಟ್ಕಳ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಎಷ್ಟು ಜನ ಹೊಸ ಶಿಕ್ಷಕರನ್ನು ನೇಮಿಸಲಾಗಿದೆ. (10,000 ಗುರಿ ಏಕೆ ಮುಟ್ಟಲಿಲ್ಲ)?

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ಮಂಜೂರಾದ ಶಿಕ್ಷಕರ ಹುದ್ದೆ ಎಷ್ಟು? ಅವಶ್ಯಕ ಹುದ್ದೆಗಳೆಷ್ಟು 1995-96ನೇ ಸಾಲಿನಲ್ಲಿ ಎಷ್ಟು ಶಿಕ್ಷಕರನ್ನು ನೇಮಿಸಲಾಗಿದೆ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ದಿನಾಂಕ 31-8-95 ರ ಅಂತ್ಯಕ್ಕೆ ಖಾಲಿ ಇದ್ದ 18,700 ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು 2 ಹಂತದಲ್ಲಿ ತುಂಬಲು ಸರ್ಕಾರದ ತೀರ್ಮಾನವಾಗಿದೆ. ಮೊದಲನೇ ಹಂತದಲ್ಲಿ ಒಟ್ಟು 9,769 ಹುದ್ದೆಗಳನ್ನು (1994ರ ಸಾಮಾನ್ಯ ನೇಮಕಾತಿಯ ಹೆಚ್ಚುವರಿ ಪಟ್ಟಿಯಿಂದ 1031 ಹುದ್ದೆಗಳು ಮತ್ತು ವಿಶೇಷ ನೇಮಕಾತಿಯಿಂದ 8738 ಹುದ್ದೆಗಳು) 1995-96ನೇ ಸಾಲಿನಲ್ಲಿ ತುಂಬಲಾಗಿದೆ. ಉಳಿದ ಹುದ್ದೆಗಳನ್ನು 2ನೇ ಹಂತದಲ್ಲಿ ಸಾಮಾನ್ಯ ನೇಮಕಾತಿಯ ಮೂಲಕ ಶೀಘ್ರದಲ್ಲಿ ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ಮಂಜೂರಾದ ಹುದ್ದೆಗಳು 6262.

ಶಿಕ್ಷಕರ ವಿದ್ಯಾರ್ಥಿ ಅನುಪಾತ 1:50 ರಂತೆ 140 ಹುದ್ದೆಗಳ ಅವಶ್ಯಕತೆ ಇದೆ.

1995-96ನೇ ಸಾಲಿನಲ್ಲಿ 322 ಹುದ್ದೆಗಳಿಗೆ ನೇಮಕಾತಿಯಾಗಿದೆ.

ಧಾರವಾಡ ಸರ್ಕಾರಿ ಮಹಿಳಾ ತರಬೇತಿ ಸಂಸ್ಥೆಯ ಶತಮಾನೋತ್ಸವ

364 - ಶ್ರೀ ಚಂದ್ರಕಾಂತ ಜಿ. ಬೆಲ್ಲದ (ಧಾರವಾಡ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡದ ಸರ್ಕಾರಿ ಮಹಿಳಾ ತರಬೇತಿ ಸಂಸ್ಥೆಯ ಶತಮಾನೋತ್ಸವ ಆಚರಿಸಬೇಕಾಗಿರುವುದು ಸರ್ಕಾರದ ಗಮನದಲ್ಲಿ ಇದೆಯೇ?

ಅ) ಈಗ ಕರ್ನಾಟಕದ ಹೆಮ್ಮೆಯ ಮಹಿಳಾ ಶಿಕ್ಷಕಿಯರನ್ನು ತರಬೇತಿ ಪಡಿಸುವ ಧಾರವಾಡದ ಶೈಕ್ಷಣಿಕ ಮಹಾನಗರದ ಸಂಸ್ಥೆಯಲ್ಲಿ ಈಗ ಶತಮಾನೋತ್ಸವ ಆಚರಿಸಬೇಕಾದ ಐತಿಹಾಸಿಕ ವರ್ಷದಲ್ಲಿ ಕಟ್ಟಿಸಬೇಕಾಗಿರುವ ಕಟ್ಟಡಗಳು ಯಾವುದು ಅವುಗಳ ಬಗ್ಗೆ ಸರ್ಕಾರ ಕಟ್ಟಡಗಳು ಕ್ರಮ ತೆಗೆದುಕೊಂಡಿದೆ. ತಿಳಿಸುವಿರಾ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಇದೆ.

ಆ)

		ಅಂದಾಜು ವೆಚ್ಚ
1)	ಶತಮಾನೋತ್ಸವ ಭವನ	12.00 ಲಕ್ಷ
2)	ವಸತಿ ಗೃಹ	20.00 ಲಕ್ಷ
3)	ಶಾಲಾಲಯ	3.00 ಲಕ್ಷ
4)	ಕ್ರಾಫ್ಟ್ ರೂಂ, ವರ್ಗಕೋಣೆ, ಪ್ರಯೋಗಾಲಯ ವಾಚನಾಲಯ	15.00 ಲಕ್ಷ

ಆರ್ಥಿಕ ಅನುಕೂಲತೆಯನ್ನು ಗಮನದಲ್ಲಿಟ್ಟು ಕೊಂಡು 1996-97ನೇ ಸಾಲಿನಿಂದ ಈ ಬಗ್ಗೆ ಹಂತ ಹಂತವಾಗಿ ಕ್ರಮ ತೆಗೆದುಕೊಳ್ಳಲಾಗುವುದು.

ಧಾರವಾಡ ಆರ್.ಎನ್. ಶೆಟ್ಟಿ ಕ್ರೀಡಾಂಗಣ ಕುರಿತು

367 - ಶ್ರೀ ಚಂದ್ರಕಾಂತ ಜಿ. ಬೆಲ್ಲದ (ಧಾರವಾಡ) : ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಧಾರವಾಡದ ಆರ್.ಎನ್. ಶೆಟ್ಟಿ ಕ್ರೀಡಾಂಗಣದಲ್ಲಿ ಎಲ್ಲಾ ವಿಧವಾದ ಆಟಗಳು ನಡೆಯಲು ಅವಕಾಶವಿದೆಯೇ? ಹಾಗೂ ವರ್ಷದ ಪೂರ್ಣ ಅವಧಿಯಲ್ಲಿ ಸದರಿ ಆಟದ ಬಯಲು ಉಪಯೋಗವಾಗುತ್ತಿರುವುದು ನಿಜವೇ?

2) ಧಾರವಾಡ ಎರಡು ವಿಶ್ವವಿದ್ಯಾನಿಲಯ ಪಡೆದ ಕಲಾ ಶೈಕ್ಷಣಿಕ ನಗರದಲ್ಲಿ ಒಳಾಂಗಣ ಆಟಗಳ ಬಗ್ಗೆ ಕಟ್ಟಡದ ಹಾಗೂ ಸಾಲತ್ತಿನ ಪೂರೈಕೆಯ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

3) ಈ ಎಲ್ಲಾ ಪ್ರಕರಣದ ಆಟಗಳಿಗಾಗಿ ಬೆಂಗಳೂರಿನಂತೆ ಎರಡನೆಯ ಮಹಾನಗರ ಧಾರವಾಡದಲ್ಲಿ ಸೌಲಭ್ಯಗಳನ್ನು ಒದಗಿಸಲು ಸರ್ಕಾರದಲ್ಲಿ ಇರುವ ಯೋಜನೆಗಳಾವುವು?

ಶ್ರೀ ಅಜಯಕುಮಾರ್ ಸರನಾಯಕ್ (ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು) :

1) ಹೌದು.

ಹೌದು.